# ತುಳಸಿಗೆ ಪದ್ದು ಹುಡುಕಿರೋ ಹುಡುಗ ಯಾರು?

ನಾಸ್ತಿಕ ಹುಡುಗನ ಕನಸು ಕಾಣೋ ಆಸ್ತಿಕ ಹುಡುಗಿಯ ಕಥೆ ಎಲ್ಲಿಗೆ ಬಂತು?

ತುಳಸಿ ಹಳ್ಳಿ ಹುಡುಗಿ. ಮಹಾನ್ ದೈವಭಕ್ತೆ. ಆಕೆ ಊರ ದೇವತೆ ಪದ್ಮಾವತಿಯನ್ನು ತಲೆತಲಾಂತರಗಳಿಂದ ಪೂಜಿಸ್ತಾ ಬಂದಿರೋ ಕುಟುಂಬಕ್ಕೆ ಸೇರಿದ ಅರ್ಚಕರ ಮಗಳು. ಪದ್ಮಾವತಿಯ ಮೇಲೆ ಅನವರತ ನಂಬಿಕೆ ಇಟ್ಟಿರೋ ಕುಟುಂಬ. ಊರಲ್ಲಿರೋ ಪದ್ಮಾವತಿ ಎಲ್ಲರಿಗೂ ದೇವತೆಯಾದರೆ ತುಳಸಿಗೆ ಫ್ರೆಂಡ್. ಆಕೆ ಪದ್ಮಾವತಿಯನ್ನು ಪದ್ದು ಎಂದೇ ಕರೆ-ಯೋದು. ತುಳಸಿಗೆ ಮುದ್ದಿನ ತಮ್ಮ ಮತ್ತು ಪ್ರೀತಿಯ ತಂಗಿ ಇದ್ದಾರೆ.

ತುಳಸಿಗೆ ವರ್ಷಗಳಿಂದ ಒಂದು ಕನಸು ಬೀಳುತ್ತಿರುತ್ತೆ. ಆ ಕನಸಿನಲ್ಲಿ ಆಕೆಯನ್ನ ಒಬ್ಬ ರಾಜಕುಮಾರನ ಥರದ ಹುಡುಗ ಕಾಪಾಡ್ತಿರ್ತಾನೆ. ಆದ್ರೆ ಆ ಕನಸಿನ ಹುಡುಗನ ಮುಖ ಮಾತ್ರ ತುಳಸಿಗೆ ಕಾಣ ಸೋದಿಲ್ಲ. ಪದ್ಮಾವತೀನ ಕಾಡೋ ಬೇಡೋ ತುಳಸಿ! ಕೊನೆಗೂ ಒಂದಿನ ಪದ್ಮಾವತಿ ಆ ಹುಡುಗನ ಮುಖ ತೋರಿಸ್ತಾಳೆ, ಮುಖ ಅಂತೂ ತೋರಿಸ್ದೆ. ಆದ್ರೆ ಭೇಟಿ ಯಾವಾಗ ಮಾಡಿಸ್ತೀಯ ಅನ್ನೋದು ಪದ್ದೂನ ಎದುರು ತುಳಸಿಯ ಮುಂದಿನ ಬೇಡಿಕೆ.

ಸಾಮ್ರಾಟ್ ಸಿಟಿ ಹುಡುಗ. ಸೂಪರ್‌ಸ್ಟಾರ್. ಸಿನಿಮಾದಲ್ಲಿ ಜನಪ್ರಿಯ ನಟ. ಆದರೆ ದೇವರು ಅಂದ್ರೆ ಇವನಿಗಾಗಲ್ಲ. ತನ್ನ ಯಶಸ್ಸು ಏನೇ ಇದ್ರೂ ತನ್ನ ಸ್ವಂತ ಪರಿಶ್ರಮದಿಂದ ಗಳಿಸಿರೋದು. ಇದಕ್ಕೆ ದೇವರಿಗೆ ಯಾಕೆ ಕ್ರೆಡಿಟ್ ಕೊಡಬೇಕು ಎಂಬ ವ್ಯಕ್ತಿ. ಅವನಿಗೆ ಅವಂತಿಕಾ ಅನ್ನೋ ಗೆಳತಿ ಇದಾಳೆ.

ಈ ಮಧ್ಯೆ ತುಳಸಿಗೆ ಅವಳದೇ ಊರಿನ ಶಂಭೂ ಅನ್ನೋ ವಿಲನ್‌ನ ಕಾಟ. ಕಾರಣಾಂತರದಿಂದ ಅವ್ಳ ಮದ್ವೆ ಅದೇ ಶಂಭು ಜೊತೆನೇ ನಿಶ್ಚಯ ಆಗುತ್ತೆ. ಪದ್ಮಾವತಿ ಮೇಲಿನ ನಂಬಿಕೆಯಿಂದಾಗಿ ಅವಮಾನ ಮತ್ತು ಕಷ್ಟ ಸಹಿಸಿಕೊಳ್ಳೋ ತುಳಸಿ ಮತ್ತು ಅವಳ ಕುಟುಂಬ. ತುಳಸಿ ಕನಸಲ್ಲಿ ಬರೋ ಹುಡುಗನ ಬಗ್ಗೆ ಉಡಾಫೆ ಮಾಡೋ ಶಂಭುಗೆ ಒಂದಿನ, ಕನಸಲ್ಲಿ ಬರೋ ಹುಡುಗ ಸಾಮ್ರಾಟ್ ಅಂತ ಗೊತ್ತಾಗುತ್ತೆ. ಅದನ್ನೂ ಉಡಾಫೆ ಮಾಡೋ ಶಂಭೂಗೆ ಒಬ್ಬರು ಜ್ಯೋತಷಿ ಹೇಳೋ ಮಾತು ತಲೆ ಕೆಡಿಸುತ್ತೆ. ತನ್ನನ್ನ ಮದ್ವೆ ಆಗೋ ದಿನಕ್ಕಿಂತ ಒಂದಿನ ಮೊದಲೇ ತುಳಸಿ ಕತ್ತಿಲ್ಲಿ ತಾಳಿ ಇರುತ್ತೆ ಅನ್ನೋ ವಿಷಯಾನ ಜ್ಯೋತಿಷಿ ಹೇಳ್ತಾರೆ. ಇಂಥ ಸಮಯದಲ್ಲೇ ಸಾಮ್ರಾಟ್‌ಗೆ ತುಳಸಿಯ ಊರಿಗೆ ಸಮೀಪದಲ್ಲಿ ಪದ್ಮನಾಭ ಅನ್ನೋ ದೇವಸ್ಥಾನದಲ್ಲಿ ಶೂಟಿಂಗ್ ನಿಶ್ಚಯ ಆಗುತ್ತೆ. ಅಲ್ಲಿಂದ ಮುಂದೆ ಕಥೆ ವಿಚಿತ್ರ ತಿರುವು ಪಡೆದುಕೊಳ್ಳುತ್ತದೆ.

ತುಳಸೀನ ಇನ್ನೊಬ್ರು ಮದ್ವೆ ಆಗೋ ಮೊದಲೇ ತಾನು ಮದುವೆ ಆಗ್ತೀನಿ ಅಂತ ಆತುರಕ್ಕೆ ಬೀಳೋ ಶಂಭು. ದೇವಸ್ಥಾನದಲ್ಲಿ ತುಳಸಿ ಒಬ್ಳೇ ಇರೋ ಹೊತ್ತಲ್ಲಿ ಅವ್ಳ ಮೇಲೆ ಮುಗಿಬಿದ್ದು ತಾಳಿ ಕಟ್ಟೋದಿಕ್ಕೆ ಪ್ರಯತ್ನ ಮಾಡ್ತಾನೆ. ತುಳಸಿ ಪ್ರಜ್ಞೆ ತಪ್ಪಿ ಬೀಳ್ತಾಳೆ. ಆಕಸ್ಮಾತ್ ಶೂಟಿಂಗ್‌ಗೆ ಅಂತ ಹೊರಟಿರೋ ಸಾಮ್ರಾಟ್, ಅಲ್ಲಿಗೆ ಬಂದು ತುಳಸೀನ ಶಂಭೂನಿಂದ ಕಾಪಾಡ್ತಾನೆ.

ಮುಂದೆ ದೈವಾನುಕೂಲದಿಂದ ಸಾಮ್ರಾಟ್ ಶೂಟಿಂಗ್ ಮಾಡೋ ಜಾಗಕ್ಕೇ ತಲುಪೋ ತುಳಸಿ! ತುಳಸಿಯನ್ನು ಸಾಮ್ರಾಟ್‌ನ ಇಷ್ಟು ಹತ್ತಿರಕ್ಕೆ ತರೋ ಪದ್ಮಾವತಿ ಮುಂದೇನು ಮಾಡ್ತಾಳೆ? ಅವಳ ಮನಸ್ಸಲ್ಲೇನಿದೆ? ನಂಬಲಸಾಧ್ಯ-ವಾದ್ದೇನಾದ್ರೂ ನಡೆ-ಯುತ್ತಾ? ಮಹತ್ವದ ಘಟ್ಟವೊಂದಕ್ಕೆ ಬಂದು ನಿಂತಿರೋ ತುಳಸೀ ಕಥೆ, ಪದ್ಮಾವತಿ ಧಾರಾವಾಹಿ.

ಹಲವಾರು ಸದಭಿರುಚಿಯ ಧಾರಾವಾಹಿಗಳನ್ನು ಕನ್ನಡ ಟೆಲಿವಿಷನ್ ವೀಕ್ಷಕರಿಗೆ ನೀಡಿದ ಕಲರ್ಸ್ ಕನ್ನಡದ ಹೊಸ ಕತೆ ಇದು.

ತುಳಸಿಯಾಗಿ ಅಂದದ ಹುಡುಗಿ ದೀಪ್ತಿ ಹಾಗೂ ಸಾಮ್ರಾಟನಾಗಿ ಟಫ್ ಹುಡುಗ ತ್ರಿವಿಕ್ರಮ್ ಅಭಿನಯಿಸುತ್ತಿದ್ದಾರೆ.

ಈ ಧಾರಾವಾಹಿಯನ್ನು ಟೆಲಿವಿಷನ್ ಜಗತ್ತಿನಲ್ಲಿ ಸಾಕಷ್ಟು ಅನುಭವ ಪಡೆದಿರುವ ನಿರ್ಮಲಾ ಅವರು ನಿರ್ಮಿಸಿ ನಿರ್ದೇಶಿಸುತ್ತಿದ್ದಾರೆ. ಇವರ ಸಾಯಿನಿರ್ಮಲಾ ಪ್ರೊಡಕ್ಷನ್ 'ಪದ್ಮಾವತಿ'ಯ ನಿರ್ಮಾಣದ ಹೊಣೆ ಹೊತ್ತಿದೆ.

ಈ ಧಾರಾವಾಹಿ ಫೆಬ್ರವರಿ 6 ರಿಂದ ಕಲರ್ಸ್ ಕನ್ನಡ ಚಾನೆಲ್‌ನಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9.30ಕ್ಕೆ ಪ್ರಸಾರವಾಗ್ತಾ ಇದೆ.



ಪದ್ಮಾವತಿ

ಸೋಮ-ಶುಕ್ರ, ರಾತ್ರಿ 9.30

colors ಕನ್ನಡ